# ವಿವೇಕದ ಪ್ರಭೆ

ಡಾ. [illegible]

ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರೂ ವಿಭಾಗದ ಮುಖ್ಯಸ್ಥರೂ ಆಗಿರುವ ಶ್ರೀ ನರಸಿಂಹಮೂರ್ತಿಯವರು ಖ್ಯಾತ ಲೇಖಕರು. ವಿವೇಕಪೂರ್ಣ ಜೀವನದ ಪ್ರಾಮುಖ್ಯವನ್ನು ಅವರು ಈ ಲೇಖನದಲ್ಲಿ ಎತ್ತಿ ತೋರಿಸಿದ್ದಾರೆ.

**'ವಿವಿಚ್ಯ ಗೃಹಣಂ ವಿವೇಕಃ'** ಎಂಬ ವ್ಯುತ್ಪತ್ತಿಯಂತೆ ಒಳಿತು-ಕೆಡಕುಗಳನ್ನು, ಧರ್ಮ-ಅಧರ್ಮಗಳನ್ನು, ಪುಣ್ಯ-ಪಾಪಗಳನ್ನು ಬೇರ್ಪಡಿಸಿ ಗ್ರಹಿಸುವ ಸಾಮರ್ಥ್ಯ, ವಿವೇಕ. ಕತ್ತಲು ಕವಿದ ದಾರಿಯಲ್ಲಿ ಬಲುದೂರ ಕ್ರಮಿಸಬೇಕಾದಾಗ ಬ್ಯಾಟರಿಯ ಬೆಳಕನ್ನು ಆಶ್ರಯಿಸಿ ನಡೆಯಬೇಕಾದಂತೆ, ಬಾಳಿನ ದಾರಿಯಲ್ಲಿ ಮುನ್ನಡೆಯಲು ಬೇಕಾದ ಬೆಳಕೇ ವಿವೇಕ. ಬೆಳಕೂ ಸಮರ್ಪಕವಾಗಿದ್ದು, ದೃಷ್ಟಿಯೂ ಸರಿಯಾಗಿದ್ದಲ್ಲಿ ಮಾತ್ರ ಮುನ್ನಡೆ ಸಲೀಸಾಗುವಂತೆ ವಿವೇಕ ಬಾಳದಾರಿಯನ್ನು ಬೆಳಗುತ್ತಿದ್ದು, ಅದನ್ನು ಗುರುತಿಸುವ ಜ್ಞಾನದ ಅಂತಶ್ಚಕ್ಷು ತೆರೆದಿದ್ದಲ್ಲಿ ಮಾತ್ರ ಬಾಳಯಾತ್ರೆ ಸುಗಮ; ಸಾರ್ಥಕ. ಸುದೀರ್ಘವಾದ ಜೀವನಯಾತ್ರೆಯಲ್ಲಿ ಯಾವುದು ಬೇಕು, ಯಾವುದು ಬೇಡ ಎಂದು ವಿಮರ್ಶಿಸಿ ಸ್ವೀಕರಿಸುವ ಶಕ್ತಿ, ವಿವೇಕ. ಬಾಳ ಭವ್ಯತೆಗೆ, ಜೀವನದ ಸಾರ್ಥಕತೆಗೆ ಯಾವುದು ಓತ, ಯಾವುದು ಅಹಿತ—ಎಂದು ನಿರ್ಧರಿಸುವ ಸ್ವಂತ ಸಾಮರ್ಥ್ಯವೇ ವಿವೇಕ. ಭಗವಂತನು ಮೆಚ್ಚುವ ಪರಿ ಯಾವುದು, ಎಂಥದು—ಎಂದು ತೋರಿಸುವ ದಿವ್ಯ-ಭವ್ಯ ಬೆಳಕೇ ವಿವೇಕ.

**'ವಿವೇಕಃ ಪೋತಕೋ ಮಹಾನ್'** ಎಂಬ ಕವಿವಾಣಿಯಂತೆ ವಿವೇಕವು ಸಂಸಾರಸಾಗರವನ್ನು ಸುಸೂತ್ರವಾಗಿ ದಾಟಿಸುವ ಮಹಾ ನೌಕೆ. **'ವಿವೇಕಸ್ತ್ರಿಷು ಲೋಕೇಷು ಸಂಪದಾಂ ಪರಮಂ ಪದಂ'** ಎಂಬ ಸೂಕ್ತಿಯಂತೆ ವಿವೇಕವೇ ಮೂರು ಲೋಕಗಳಲ್ಲಿಯೂ ದೊಡ್ಡ ಸಂಪತ್ತು. ವಿವೇಕಕ್ಕೆ ವಿರುದ್ಧವಾದುದು ಅವಿವೇಕ. ನೀರ-ಕ್ಷೀರಗಳನ್ನು ಬೇರ್ಪಡಿಸದೆ ಒಂದೇ ಎಂದು ಭಾವಿಸಿ ಸ್ವೀಕರಿಸುವ ಮಂದಬುದ್ಧಿ, ಇದು. ಇಂತಹ ಅವಿವೇಕ ಎಲ್ಲ ಆಪತ್ತುಗಳಿಗೂ ಮೂಲ. **ಅವಿವೇಕಃ ಪರಮಾಪದಾಂ ಪದಮ್**—ಎನ್ನುತ್ತಾನೆ ಮಹಾಕವಿ ಭಾರವಿ. ಅವಿವೇಕಿಗಳು ಜೀವನದಲ್ಲಿ ಹೆಜ್ಜೆ-ಹೆಜ್ಜೆಗೂ ಎಡವಿ ಬೀಳುತ್ತಾರೆ. **ವಿವೇಕಭ್ರಷ್ಟಾನಾಂ ಭವತಿ ವಿನಿಪಾತಃ ಶತಮುಖಃ**—ಎನ್ನುತ್ತಾನೆ, ನೀತಿಶತಕಕಾರ ಭರ್ತೃಹರಿ.

ವಿವೇಕವೆಲ್ಲಿದೆಯೋ ಅಲ್ಲಿ ಆಸಕ್ತಿ, ಛಲ ಹಾಗೂ ಧೈರ್ಯಗಳ ಒರತೆ ಸದಾ ಒಸರುತ್ತಿರುತ್ತದೆ. ಆ ಒರತೆಯನ್ನು ಮತ್ತಷ್ಟು ಉಕ್ಕಿಸಿ, ಹೃನ್ಮನಗಳ ಕತ್ತಲನ್ನು ಓಡಿಸಲು ಬೇಕಾದ ಬೆಳಕು ಬೀರುವ ಒತ್ತು ಗುಂಡಿಯಂತೆ ಕೆಲಸ ಮಾಡುತ್ತದೆ, ಈ ವಿವೇಕ. ಆದ್ದರಿಂದಲೇ ಶಾಸ್ತ್ರಗಳು ವಿವೇಕವನ್ನು ಒಳಗಣ್ಣು ಎನ್ನುತ್ತವೆ. ನಮ್ಮ ಅಂತರಂಗ ಶುದ್ಧಗೊಳ್ಳಬೇಕಾದರೆ ಈ ಒಳಗಣ್ಣು ಸದಾ ತೆರೆದಿರಬೇಕು. ನಮ್ಮ ಬಾಳು ಸಮಾಜಕ್ಕೆ ಉಪಯುಕ್ತವಾಗುವಂತೆ, ಇತರರಿಗೆ ಸಹ್ಯವಾಗುವಂತೆ ಬೆಳಗಬೇಕಾದರೆ ಈ ಅಂತಶ್ಚಕ್ಷು ಸದಾ ಜಾಗೃತವಾಗಿರಬೇಕು.

ಸಿನೇಮಾ ಮಂದಿರದ ಎದುರು ಹಾಕಿರುವ ಅತ್ಯಾಕರ್ಷಕವಾದ ಭಿತ್ತಿಚಿತ್ರ, ನಟ-ನಟಿಯರ ಆಳೆತ್ತರದ ಪ್ರತಿಮೆ, ಹನುಮಂತನ ಬಾಲದಂತೆ ಸುದೀರ್ಘವಾದ ಸರದಿಯ ಸಾಲು—ಇವನ್ನೆಲ್ಲ ನಮ್ಮ ಹೊರಗಣ್ಣು ನೋಡಿ, ಆಶೆಪಟ್ಟು, 'ಈಗಲೇ ಈ ಸಿನೆಮಾ ನೋಡಬೇಕು' ಎಂದು ತಕ್ಷಣ ಮನಸ್ಸಿಗೆ ಆಜ್ಞೆ ಮಾಡುತ್ತದೆ. ಆದರೆ ಅಂತರ್ಯದಲ್ಲಿ ವಿವೇಕ ಜಾಗೃತವಾಗಿದ್ದು ಒಳಗಣ್ಣು ತೆರೆದಿದ್ದಲ್ಲಿ ಮನಸ್ಸಿನ ಯಾವುದೋ ಆಳದ ಮೂಲೆಯಿಂದ ಧ್ವನಿ ಹೊರಡುತ್ತದೆ: 'ಬೇಡ, ಈ ಅಶ್ಲೀಲ ಸಿನೇಮಾ ನೋಡಿ ಮನಸ್ಸು ಕೆಡಿಸಿಕೊಳ್ಳುವುದು ಬೇಡ'—ಎಂದು. ಆಗ ಮನದೊಳಗಿನ ಬಯಕೆ ಮತ್ತೆ ತಲೆ ತುರುಕಿಸಿ, 'ಛೆ! ಇಂದು ಕಿಸೆಯಲ್ಲಿ ದುಡ್ಡಿದೆ; ಪುರುಸತ್ತೂ ಸಾಕಷ್ಟಿದೆ. ಇಂದು ಬಿಟ್ಟರೆ ನಾಳೆ ಈ ಸಿನೇಮಾವೂ ಇರಲಾರದು. ಇಂದೇ ಕೊನೆಯ ಪ್ರದರ್ಶನ. ಹೋಗು, ಸರದಿಯ ಸಾಲಿನಲ್ಲಿ ಜಾಗ ಹಿಡಿ'— ಎಂದು ಪ್ರೇರೇಪಿಸುತ್ತದೆ; ಪುಸಲಾಯಿಸುತ್ತದೆ. ಆದರೆ ವಿವೇಕದ ಕಣ್ಣು ಅಂತರ್ಯದಲ್ಲಿ ತೆರೆದಿದ್ದ ಪಕ್ಷದಲ್ಲಿ 'ಈ ಕೆಟ್ಟ ಅಶ್ಲೀಲ ಸಿನೇಮಾ ಒಂದೇ ಮನೋರಂಜನೆಯೇ? ಊರಿನಲ್ಲಿ ಇಂದು ಒಳ್ಳೆಯ ಸಂಗೀತ ಕಚೇರಿ ಇದೆ. ದೇವಸ್ಥಾನದಲ್ಲಿ ಸಂಜೆ ಹೊತ್ತು ಹರಿಕತೆ ಇದೆ. ಮನೆಯ ಕಪಾಟಿನಲ್ಲಿ ಓದಲು ಒಳ್ಳೆಯ ಪುಸ್ತಕಗಳಿವೆ. ಛೀ! ಈ ಹಾಳು ಸಿನೇಮಾಕ್ಕೆ ಹೋಗುವುದು ಬೇಡ'—ಎಂದೆಲ್ಲ ವಿಮರ್ಶಿಸಿ ಸರಿದಾರಿ ತೋರಿಸುತ್ತದೆ. ಹೀಗೆ ಚಂಚಲಗೊಂಡ ಮನಸ್ಸಿಗೆ ಈ ವಿವೇಕವೇ ಅಂಕುಶ. ಬುದ್ಧಿಯ ದಾರಿದ್ರ್ಯವನ್ನು ಇಂಗಿಸಲು ಈ ವಿವೇಕವೇ ಕಾಮಧೇನು ; ಕಲ್ಪವೃಕ್ಷ.

ದಿನನಿತ್ಯದ ಕುಟುಂಬ ಜೀವನದ ಸಮಸ್ಯೆಯಿಂದ ಹಿಡಿದು ಅಂತರಾಷ್ಟ್ರೀಯ ಸಮಸ್ಯೆಗಳವರೆಗೆ ನಮ್ಮ ಎಲ್ಲ ಸಮಸ್ಯೆಗಳನ್ನು ತುಸು ವಿವೇಕವಿದ್ದಲ್ಲಿ ಪರಿಹರಿಸಿಕೊಳ್ಳಲು ಸಾಧ್ಯ. ಈ ವಿವೇಕದ ಉದಯಕ್ಕೆ ತಾಳ್ಮೆ ಬೇಕು; ಒಳಿತು-ಕೆಡಕುಗಳೆರಡನ್ನೂ ತೂಗಿ ನೋಡುವ ವ್ಯವಧಾನ ಬೇಕು. ಜಗತ್ತಿನ ಕಲ್ಯಾಣಕ್ಕಾಗಿ ನಿರ್ಮಾಣಗೊಂಡ ನಮ್ಮ ಎಷ್ಟೆಷ್ಟೋ ವೈಜ್ಞಾನಿಕ ಉಪಕರಣಗಳು, ಅಣುಶಕ್ತಿ—ಇವೆಲ್ಲ ಇಂದು ದುರುಪಯೋಗಗೊಂಡು ಜಗತ್ತನ್ನೇ ಕ್ಷಣಮಾತ್ರದಲ್ಲಿ ಧ್ವಂಸಗೊಳಿಸಲು ಸಿದ್ಧವಾಗಿರುವುದಕ್ಕೆ ಮುಖ್ಯ ಕಾರಣ ಈ ವಿವೇಕದ ಅಭಾವ. ಅನಾದಿ ಕಾಲದಿಂದಲೂ ವಿವೇಕದ ಪಥದಲ್ಲಿ ನಡೆದು, ಬಾಳಿ-ಬೆಳಗಿದ ದೇಶ ವಿದೇಶಗಳ, ಹಿರಿಯರ, ಮಹಾತ್ಮರ ಹಾಗೂ ದೇವಮಾನವರ ಜೀವನ ಸಂದೇಶಗಳು ನಮ್ಮ ಮುಂದಿವೆ. ವಿವೇಚನಾಮಯವಾದ ಬದುಕಿನ ಸರಳ ಸೂತ್ರಗಳನ್ನು ನಮಗೆ ತಿಳಿಸಿಕೊಡುತ್ತವೆ, ಅವು. ಆ ಕಡೆಗೆ ನಮ್ಮ ಒಲವು ಹೆಚ್ಚಬೇಕು; ಬಯಕೆ ಬೇರೂರಬೇಕು; ಆಸಕ್ತಿ ಅರಳಬೇಕು; ಪರಿಶ್ರಮ ಪುಟಗೊಳ್ಳಬೇಕು. ಆಗ ಈ ವಿವೇಕದ ಪ್ರಭೆ ನಮ್ಮ ಬದುಕನ್ನು ಕೊಂಚವಾದರೂ ಆವರಿಸೀತು. ✸